MAY 2025 **U/ID 30704/ULC2A**

Time : Three hours Maximum : 75 marks

PART A — (10 × 2 = 20 marks)

I. ಕೆಳಗಿನವುಗಳಲ್ಲಿ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಉತ್ತರಿಸಿ. ಉತ್ತರದ ಮಿತಿ 30 ಪದಗಳು.

1. ಕಾಡಿನ ನಾಡು ಗಂಧರ್ವರ ಸೀಮೆಯಾದದ್ದು ಹೇಗೆ?

2. ತುಂಗಾ ನದಿಯನ್ನು ಕವಿ ಹೇಗೆ ವರ್ಣಿಸಿದ್ದಾರೆ?

3. ಜಿ.ಎಸ್. ಶಿವರುದ್ರಪ್ಪ.

4. ಕವಿ, ಯಾವ ಹಕ್ಕಿಗಳು ಶಾರದೆಯ ಕಥೆಯನ್ನು ವರ್ಣಿಸಿವೆಯೆಂದು ಹೇಳುತ್ತಾರೆ?

5. 'ಮನೆ ತುಂಬಿಸುವುದು' ಕವನವನ್ನು ರಚಿಸಿರುವ ಕವಿ ಯಾರು?

6. ಮಲ್ಲಿಯು ನಲ್ಲಿಯ ಬಳಿ ಮಾಡಿರುವ ನಿಯಮ, ಶಿಸ್ತುಗಳು ಯಾವುವು?

7. 'ಮೈಸೂರು ಮಲ್ಲಿಗೆಯ ಕವಿ' ಎಂದು ಯಾರನ್ನು ಕರೆಯಲಾಗುತ್ತದೆ?

8. 'ಓ ನನ್ನ ಜನವೇ!' ಕವನದಲ್ಲಿ ಕವಿ ಕರಾವಳಿ ಪ್ರದೇಶವನ್ನು ಹೇಗೆ ಚಿತ್ರಿಸಿದ್ದಾರೆ?

9. 'ದೇವರು–ಪೂಜಾರಿ' ಕವನದಲ್ಲಿ ಕವಿಯು, ಜನರಿಗೆ ಪೂಜಾರಿ ಏನನ್ನು ಹಂಚುತ್ತಾರೆಂದು ತಿಳಿಸುತ್ತಾರೆ?

10. ನಿರೂಪಕರ ತಾಯಿ ಹೆಣ್ಣುಗಳನ್ನು ತಿರಸ್ಕರಿಸಲು ನೀಡುವ ಕಾರಣಗಳು.

11. 'ಕಾಲ ನಿಲ್ಲುವುದಿಲ್ಲ' ಎಂದು ಕವಿ ಹೇಳಲು ಕಾರಣವೇನು?

12. ಮನೆ ಬದಲಾಯಿಸಲು ರಾತ್ರಿಗಾಗಿ ಕಾಯುತ್ತಿದ್ದಾರೆಂದು ಹೇಳಲು ಕಾರಣವೇನು?

PART B — ($5 \times 5 = 25$ marks)

II. ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ಉತ್ತರದ ಮಿತಿ 200 ಪದಗಳು.

13. ಅಂಗುಲ ಹುಳು ಹೇಗೆ ತಪ್ಪಿಸಿಕೊಂಡಿತು?

14. 'ಅತಿಥಿಗಳು' ಕವನದಲ್ಲಿ ಕಂಡುಬರುವ ಅನೂಹ್ಯ ಘಟನೆಗಳು.

15. 'ಮಬ್ಬಿನಿಂದ ಮಬ್ಬಿಗೆ' ಕವನದಲ್ಲಿ ಬರುವ ಗಡಿಯಾರದ ಚಲನೆ.

16. ಬಡವರನ್ನು ಮಾತ್ರ ಟೀಕಿಸುವುದನ್ನು ಕಂಡು ಕವಿ ಹೇಗೆ ಸಮಾಧಾನ ಪಟ್ಟುಕೊಳ್ಳುತ್ತಾನೆ?

17. 'ಬಡವರ ಒಡಲಿನ ಬಡಬಾನಲದಲ್ಲಿ ಸುಡುಸುಡು ಪಂಜು ಕೈಯೊಳಗಿತ್ತೋ' — ಸಂದರ್ಭದೊಂದಿಗೆ ವಿವರಿಸಿ.

18. 'ಈಗಿವಳು ಶಾರದೆ – ಸದಾ ಶಾಂತೆ, ಶುಚಿಸ್ಮಿತೆ, ಗಂಭೀರೆ, ತೇಜೋನ್ವಿತೆ' — ಸಂದರ್ಭದೊಂದಿಗೆ ವಿವರಿಸಿ.

19. 'ನಲ್ಲಿ ತಾವ್ ನಂ ಮಲ್ಲಿ' ಕವಿತೆಯ ಆಶಯ.

PART C — (3 × 10 = 30 marks)

III. ಕೆಳಗಿನವುಗಳಲ್ಲಿ ಒಟ್ಟು ಮೂರು ಪ್ರಶ್ನೆಗಳಿಗೆ ಉತ್ತರಿಸಿ. 24 ನೇ ಪ್ರಶ್ನೆ ಕಡ್ಡಾಯ. ಉತ್ತರದ ಮಿತಿ 500 ಪದಗಳು.

20. 'ಕುರುಡು ಕಾಂಚಾಣ' ಕವನದ ಪ್ರತಿಮಾ ನಿರ್ಮಿತಿಯನ್ನು ವಿವರಿಸಿ.

21. 'ಓ ನನ್ನ ಜನವೇ!' — ಕವನದಲ್ಲಿ ಕನ್ನಡ ನಾಡಿನ ಜನತೆಗೆ ಕವಿ ನೀಡುವ ಆಹ್ವಾನವನ್ನು ವರ್ಣಿಸಿ.

22. 'ಮನೆಯಿಂದ ಮನೆಗೆ' ಕವನವು ಲೌಕಿಕತೆಯಿಂದ ಆಧ್ಯಾತ್ಮದ ಕಡೆಗೆ ಸಾಗುವ ಪರಿಯನ್ನು ವಿಶ್ಲೇಷಿಸಿ.

23. 'ಎಷ್ಟೇ ವಿದ್ಯಾವಂತರಾದರೂ, ಸಾಂಪ್ರದಾಯಿಕ ಮೂಢನಂಬಿಕೆಗಳಿಂದ ಹೊರಬರಲು ಸಾಧ್ಯವಾಗುತ್ತಿಲ್ಲ' — ಎಂಬುದು ಅಮ್ಮ, ಆಚಾರ, ನಾನು ಕವನದಲ್ಲಿ ಹೇಗೆ ವ್ಯಕ್ತವಾಗಿದೆ?

24. ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ.

(ಅ) ಲಾಕ್‌ಡೌನ್‌ನ ಪರಿಣಾಮಗಳು

(ಆ) ಮಣ್ಣಿನ ಫಲವತ್ತತೆ

(ಇ) ನಿಮ್ಮ ಮೆಚ್ಚಿನ ಕ್ರೀಡೆ

———————